# KARNATAKA LOKAYUKTA

No:UPLOK-2/DE/361/2016/ARE-9

M.S.Building,
Bengaluru-560001.
Date: 24.5.2024

## ENQUIRY REPORT

:PRESENT:

SHUBHAVEER.B.
Additional Registrar of Enquiries-9,
Karnataka Lokayukta, Bengaluru.

Sub: Departmental enquiry against (1) **Dr. D.B. Anjutagi, the then District health and Family Welfare Officer, Chikkaballapura (now retired)** (2) Dr.K. Babureddy, (3) Dr.B. Bhaktavathsalam, and (4) Dr. Rangaswamy H.V, ( With regard to Sl. No. 2 to 4 already report was sent) -reg.

Ref:
1) G.O.No.AaKuKa 181 MSA 2016, Bengaluru, Dated: 30.8.2016,
2) Nomination order No. UPLOK-2/DE/ 361/2016, Bengaluru, Dated: 8.9.2016 of Hon'ble Upalokayukta, Bengaluru.
3) Enquiry report, dated 30.4.2019.
4) Recommendation of Hon'ble Upalokayukta, dated 6.5.2019.
5) Final G.O No. AaKuKa 181 MSA 2016, Bengaluru, dated 15.12.2020.
6) Order of Hon'ble KSAT passed in Application No. 389/2021, dated 8.2.2023.

* * *

Initially departmental enquiry was initiated against the above shown (1) Dr. D.B. Anjutagi, (2) Dr.K. Babureddy, (3) Dr.B. Bhaktavathsalam, and (4) Dr. Rangaswamy H.V, (hereinafter referred to as Delinquent Government Officials, for short, DGO.s-No.1 to 4 respectively).

2. Enquiry report and recommendation against all the above four DGO.s were submitted to Competent Authority. In turn Competent Authority has passed Government order No. AaKuKa 181 MSA 2016, Bengaluru, dated 15.12.2020; against DGO.s No.1 to 4 and enquiry proceedings was closed on 30.12.2020.

3. However, the DGO-1/ Dr.D.B.Anjutagi filed application before Hon'ble KSAT in application No. 389/2021 to quash the above said enquiry report as well as Government order, dated: 15.12.2020.

4. The Hon'ble KSAT has allowed the said application as against DGO-1 only and remanded the matter to the Enquiry Officer to follow the procedure contemplated under Rule 11 (18) of KCS (CC&A) Rules, 1957, and then to furnish fresh report. After complying with the order passed by Hon'ble KSAT this report is submitted against DGO-1 only

5. In pursuance of the Government Order cited above, at reference No.s 1, Hon'ble Upalokayukta, vide-order, dated 8.9.2016 cited above at reference No.2, has nominated Additional Registrar of

Enquiries-9 (for short, ARE-9) to frame the charges and to conduct enquiry against the aforesaid DGO.s.

6. The ARE-9 issued the articles of charges to the DGO.s, enclosing the statement of imputations of misconduct, list of witnesses proposed to be examined and list of documents proposed to be relied, in support of charges and called them to appear before ARE-9.

7. The articles of charge issued by ARE-9 against the DGO.s is as shown infra:

ANNEXURE-1

CHARGE

*ಆ.ಸ.ನೌ ರವರಾದ (1) ಡಾ: ಡಿ.ಬಿ. ಅಂಜುಟಗಿ, (2) ಡಾ: ಕೆ.ಬಾಬುರೆಡ್ಡಿ, (3)ಡಾ: ಬಿ.ಭಕ್ತವತ್ಸಲಂ, ಚಿಕ್ಕಬಳ್ಳಾಪುರ, ಮತ್ತು 4) ಡಾ: ರಂಗಸ್ವಾಮಿ ಹೆಚ್.ವಿ., ನೀವು ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ:*

*(1) ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿಯು 2007ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯ ಆವರಣದಲ್ಲಿ ನಡೆದಿದ್ದರೂ ಕೂಡ, ಡಿ.ಹೆಚ್.ಓ. ಕಛೇರಿಗೆ ಬಾಡಿಗೆಗೆ ಪಡೆದ ಕಲ್ಯಾಣ ಪಂಟಪದಲ್ಲಿ ಟಿ.ಹೆಚ್.ಓ ಕಚೇರಿಯ ನಾಮಫಲಕವನ್ನು ಹಾಕಿ, ಅಲ್ಲಿ ಕಚೇರಿ ನಡೆಸದೆ, ಸದರಿ ಟಿ.ಹೆಚ್.ಓ ನಾಮಫಲಕ ಹಾಕಿದ ಭಾಗಕ್ಕೆ ಪ್ರತ್ಯೇಕವಾಗಿ ರೂ.9,990/- ಬಾಡಿಗೆಯನ್ನು ಪಾವತಿಸಿರುತ್ತೀರಿ.*

*(2) ಡಿ.ಹೆಚ್.ಓ ಕಚೇರಿಗೆ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆಯುವಾಗ ಸಾರ್ವಜನಿಕ ಟೆಂಡರನ್ನು ಕರೆಯದೇ, ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ ಕಲಂ 5ರಂತೆ ಕ್ರಮ ಕೈಗೊಳ್ಳದೇ, ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ ಕಲಂ 5ನ್ನು ಉಲ್ಲಂಘಿಸಿರುತ್ತೀರಿ.*

*(3) 1 ರಿಂದ 4ನೇ ಆ.ಸ.ನೌ ಆದ ನೀವು ಎರಡು ಕಡೆ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ನಿಗದಿಯಾಗಿರುವ ವಿಚಾರ ಗೊತ್ತಿದ್ದರೂ ಸಹ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಬಾಡಿಗೆಯನ್ನು ಪಾವತಿಸಿ, ಕರ್ತವ್ಯಲೋಪವೆಸಗಿರುತ್ತೀರಿ.*

*ಅದ್ದರಿಂದ ಆ.ಸ.ನೌ ಆದ ನೀವು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ ಹಾಗೂ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ 1966ರ 2(1)(i) to (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುತ್ತೀರಿ.*

<u>ಅನುಬಂಧ-2</u>

<u>ದೋಷಾರೋಪಣೆ ವಿವರ</u>

1) *ಶ್ರೀ.ವೆಂಕಟೇಶ್ ಎನ್, ಸಂಪಾದಕರು, ಕೋಲಾರ ಸಿಂಹ ವಾರಪತ್ರಿಕೆ, ಕಾರಂಜಿಕಟ್ಟೆ, ಕೋಲಾರ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.*

2) *ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಚೇರಿಯನ್ನು (1) ಟಿ.ಹೆಚ್.ಓ, ಕಚೇರಿ (2) ಜಿಲ್ಲಾ ಮಲೇರಿಯಾ ಕಚೇರಿ, (3) ಜಿಲ್ಲಾ ಕುಷ್ಠರೋಗಗಳ ಕಚೇರಿ, ಮತ್ತು (4) ಆರ್.ಸಿ.ಹೆಚ್.ಅಧಿಕಾರಿಗಳ ಕಚೇರಿ ಎಂದು 4 ಭಾಗಗಳಾಗಿ ಮಾಡಿ ಒಂದಕ್ಕೆ ರೂ.9,990/- ಗಳಂತೆ ಒಂದೇ ಕಟ್ಟಡದಲ್ಲಿ 4 ಕಚೇರಿಗಳಿಗೆ ಒಟ್ಟು ರೂ.40,000/- ಬಾಡಿಗೆ ನೀಡುತ್ತಿದ್ದಾರೆ. ಈವರೆಗೆ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಡಿ.ಹೆಚ್.ಓ ಕಟ್ಟಡದಲ್ಲಿ ನಡೆಯುತ್ತಿದ್ದು, ಇದಕ್ಕೂ ಸಹ ತಿಂಗಳಿಗೆ ರೂ.9,990/- ನೀಡುತ್ತಿದ್ದೇವೆಂದು ಟಿ.ಹೆಚ್.ಓ ರವರು ಹೇಳಿರುತ್ತಾರೆ. ಆದರೆ,*

ಜಿಲ್ಲಾ ಶಸ್ತ್ರ ಚಿಕಿತ್ಸಕರು ಟಿ.ಹೆಚ್.ಓ ಕಚೇರಿ ಸಾರ್ವನಿಕ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಉಂಟುಮಾಡುತ್ತಿದ್ದಾರೆ. 2007 ರಿಂದ ಇಲ್ಲಿಯತನಕ ಖಾಸಗಿ ಕಟ್ಟಡದಲ್ಲಿ ಟಿ.ಹೆಚ್.ಓ ಕಚೇರಿ ಬಾಡಿಗೆಗೆ ಇರದಿದ್ದರೂ ಕೂಡ ಸುಮ್ಮನೆ ಬಾಡಿಗೆ ನೀಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು ನಷ್ಟವನ್ನು ವಸೂಲು ಮಾಡಬೇಕೆಂದು ಆಪಾದನೆ ಮಾಡಿ ದೂರುದಾರರು ಈ ದೂರನ್ನು ಸಲ್ಲಿಸಿರುತ್ತಾರೆ.

3) ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಆದೇಶಿಸಲಾಗಿರುತ್ತದೆ. ಸದರಿಯವರು ತಮ್ಮ ವರದಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರ ವರದಿಯಂತೆ ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾಗಿದ್ದ ಡಾ:ಭಕ್ತವತ್ಸಲಂ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು. ಅದಕ್ಕೆ ಸದರಿ ಡಾ:ಭಕ್ತವತ್ಸಲಂ ರವರು ನೀಡಿದ ವರದಿಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿಗಳು ಹಾಗೂ ಪ್ರತಿ ವಿಭಾಗಗಳು ಹೊಂದಿರುವ ಕಟ್ಟಡಗಳಿಗೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಪೂರ್ಣ ಆವರಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಾಧಿಕಾರಿಗಳಿಗೆ ಸೇರಿದ ಕಚೇರಿಗಳು ಇರುತ್ತವೆ. ಸದರಿ ಕಚೇರಿಗಳಿಂದ ಈವರೆಗೂ ಬಾಡಿಗೆ ಪಾವತಿಸಿರುವುದಿಲ್ಲ. ಆದ್ದರಿಂದ, ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲವೆಂದು ಹೇಳಿರುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ, ತನಿಖೆ ನಡೆಸಿ, ಕಟ್ಟಡ ಸದುಪಯೋಗವಾಗುತ್ತದೆಯೇ ಎಂಬುದನ್ನು ಪರಿಶೀಲಿಸಿ ವರದಿ ಸಲ್ಲಿಸಲು ಡಾ:ಉಷಾ ಅಣ್ಣಾಪೂರೆ, ಜಿಲ್ಲಾ ನೋಡಲ್ ಅಧಿಕಾರಿ ಇವರಿಗೆ ಸೂಚಿಸಿದ್ದು, ಸದರಿಯವರು

ಪರಿಶೀಲಿಸಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟು ಮಾಡಿಲ್ಲ ಎಂದು ಹಾಗೂ ಸ್ಥಳದ ಅಭಾವ ಮತ್ತು ಆಡಳಿತಾತ್ಮಕತೆಯ ಅನುಕೂಲತೆಯ ಸಲುವಾಗಿ ತಾಲ್ಲೂಕು ಆರೋಗ್ಯ ಆಡಳಿತಾಧಿಕಾರಿಗಳ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯನ್ನು ಆಗಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶಾನುಸಾರ ಬಾಡಿಗೆಗೆ ಪಡೆದಿರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ. ಇವೆಲ್ಲವನ್ನೂ ಪರಿಶೀಲಿಸಿ ನೋಡಲ್ ಅಧಿಕಾರಿಗಳ ವರದಿಯನ್ನು ಒಪ್ಪಿ ಡಾ:ಭಕ್ತವತ್ಸಲಂ ರವರ ವಿರುದ್ಧದ ಆರೋಪವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ ಎಂದು ಹೇಳಿರುತ್ತಾರೆ.

4) ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ತಮ್ಮ ವರದಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸರ್ಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿ, ಮನಬಂದಂತೆ ತಾಲ್ಲೂಕು ಆರೋಗ್ಯ ಕಚೇರಿಗೆ ಬಾಡಿಗೆ ಪಾವತಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆಂದು ವರದಿ ಮಾಡಿರುತ್ತಾರೆ.

5) ದೂರುದಾರರು ಹಾಜರು ಪಡಿಸಿದ ದಾಖಲೆಗಳಲ್ಲಿ ದಿ.9/11/12 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರಿಗೆ ಬರೆದ ಪತ್ರದ ಪ್ರತಿ ಇದ್ದು, ಸದರಿ ಪತ್ರದಲ್ಲಿ ಜಿಲ್ಲಾಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಚಿಕ್ಕಬಳ್ಳಾಪುರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ದಿ.3/8/12 ರಂದು ಭೇಟಿ ನೀಡಿ ಪರಿಶೀಲಿಸಿದಾಗ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಡಿ.ಹೆಚ್.ಓ. ಕಚೇರಿಯ ಆವರಣದಲ್ಲಿದ್ದು, ಯಾವುದೇ ಕಚೇರಿ ಕಾರ್ಯ ನಡೆಯುತ್ತಿರುವುದಿಲ್ಲ, ಕೇವಲ ನಾಮಕಾವಸ್ತೆ ನಾಮಫಲಕವನ್ನು ಅಳವಡಿಸಿರುತ್ತಾರೆ. ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ದ್ವಿ.ದ.ಸಹಾಯಕರಾದ ಜಿ.ಗಿರೀಶ್‌ಕುಮಾರ್ ಮತ್ತು ಅಧೀಕ್ಷಕರಾದ ಶ್ರೀಮತಿ ಪದ್ಮಾವತಿಯವರು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ

ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವುದಾಗಿ ದೃಢೀಕರಿಸಿರುತ್ತಾರೆ. ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ಬೀಗ ಹಾಕಿದ್ದು, ಅಲ್ಲಿ ಕೆಲವು ಕುರ್ಚಿಗಳನ್ನು ಬಿಟ್ಟರೆ ಕಚೇರಿ ನಡೆಯುತ್ತಿರುವ ಯಾವುದೇ ಲಕ್ಷಣಗಳು ಕಂಡುಬರುತ್ತಿಲ್ಲ. ತಾಲ್ಲೂಕು ಆರೋಗ್ಯಾಧಿಕಾರಿಗಳನ್ನು ವಿಚಾರಿಸಿದಾಗ, ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ನಡೆಯುತ್ತಿರುವುದಾಗಿ ತಿಳಿಸಿದರು. ಸ್ಥಳ ಪರಿಶೀಲಿಸಿದಾಗ ಕಂಡುಬಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಈ ಎಲ್ಲಾ ಅಂಶಗಳನ್ನ ಪರಿಶೀಲಿಸಿದಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಹಾಗೂ ತಾಲ್ಲೂಕು ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಶ್ರೀ.ವೆಂಕಟೇನಹಳ್ಳಿ ನಾರಾಯಣಪ್ಪ ಕಲ್ಯಾಣ ಮಂಟಪವನ್ನು ನೇರವಾಗಿ ಡಿ.ಹೆಚ್.ಓ ರವರು ಬಾಡಿಗೆಗೆ ಪಡೆದಿರುವುದು ಕಂಡುಬರುತ್ತದೆ. ಹಾಗೆಯೇ ಪ್ರತಿ ವರ್ಷ ಅಗತ್ಯವಿರುವ ಕಟ್ಟಡವನ್ನು ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 2000 ದಂತೆ ಟೆಂಡರ್ ನಡೆಸಿ ಬಾಡಿಗೆಗೆ ಪಡೆಯಬೇಕಾಗಿದ್ದು, ಸರ್ಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಪಾವಿತಿಸಿ ಸರ್ಕಾರಕ್ಕೆ ನಷ್ಟ ಉಂಟುಮಾಡಿರುತ್ತಾರೆಂದು ವರದಿ ಮಾಡಿರುವುದು ಕಂಡುಬರುತ್ತದೆ.

6) ನಂತರದಲ್ಲಿ ಉಭಯ ಪಕ್ಷಗಾರರನ್ನು ಗೌರವಾನ್ವಿತರ ಮುಂದೆ ಕರೆಸಿ ವಿಚಾರಣೆ ನಡೆಸಿ, ಹಾಲಿ ಡಿ.ಹೆಚ್.ಓ ರವರಿಂದ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ಬಾಡಿಗೆಗೆ ಕಟ್ಟಡವನ್ನು ಪಡೆಯುವ ಬಗ್ಗೆ ನಡೆದ ಪತ್ರ ವ್ಯವಹಾರದ ಮೂಲ ಕಡತವನ್ನು ಹಾಜರು ಪಡಿಸುವಂತೆ ಸೂಚಿಸಿದ ಮೇರೆಗೆ ಸದರಿಯವರು ಲಭ್ಯವಿದ್ದ ಕೆಲವು ದಾಖಲೆಗಳನ್ನು ದೃಢೀಕರಿಸಿ ಹಾಜರು ಪಡಿಸಿರುತ್ತಾರೆ. ಒಟ್ಟು 17 ದಾಖಲೆಗಳ ಪ್ರತಿಗಳನ್ನು ನೀಡಿರುತ್ತಾರೆ. ಅವುಗಳನ್ನು ಪರಿಶೀಲಿಸಿದಾಗ, 2007 ರಲ್ಲಿ ಕೋಲಾರ ಜಿಲ್ಲೆಗೆ ಸೇರಿದ ಚಿಕ್ಕಬಳ್ಳಾಪುರ ತಾಲ್ಲೂಕನ್ನು ಚಿಕ್ಕಬಳ್ಳಾಪುರ ಜಿಲ್ಲೆಯಾಗಿ ರಚಿಸಿರುವುದು ಹಾಗೂ ದಿ.21/8/2007 ರಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿಗಳು ಈ ಜಿಲ್ಲೆಗಳಿಗೆ ಹೊಸ ಹುದ್ದೆಗಳನ್ನು ಮಂಜೂರಾತಿ ಮಾಡಿ ಆದೇಶಿಸಿರುವುದು ಕಂಡುಬರುತ್ತದೆ.

ನಂತರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಡಿ.ಹೆಚ್.ಓ ಕಚೇರಿಗೆ ಅಗತ್ಯವಿರುವ ಸ್ಥಳಾವಕಾಶ, ಸಿಬ್ಬಂದಿ ಇತ್ಯಾದಿ ವಿಚಾರಕ್ಕೆ ಸಂಬಂಧಿಸಿದಂತೆ ದಿ.31/10/2007 ರಂದು ಬೆಂಗಳೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸಿ ಚಿಕ್ಕಬಳ್ಳಾಪುರ ತಾಲ್ಲೂಕು ಆಸ್ಪತ್ರೆಯನ್ನು ಜಿಲ್ಲಾಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಹಾಗೂ ಇನ್ನಿತರ ವಿಚಾರವಾಗಿ ಚರ್ಚೆ ಮಾಡಿರುವುದು ಕಂಡುಬರುತ್ತದೆ. ದಿ.23/2/2008 ರಂದು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳು ಸಭೆ ನಡೆಸಿ ಹೊಸದಾಗಿ ರಚಿಸಲ್ಪಟ್ಟ ಸದರಿ ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿಗೆ ಬಾಡಿಗೆಗೆ ಪಡೆದಿರುವ ಖಾಸಗಿ ಕಟ್ಟಡಗಳ ಬಾಡಿಗೆ ನಿಗದಿ ವಿಚಾರವಾಗಿ ನಡವಳಿಕೆ ನಡೆಸಿರುವುದು ಕಂಡುಬರುತ್ತದೆ. ಸದರಿ ದಾಖಲೆಯಲ್ಲಿ ಕ್ರಮ ಸಂ.3 ರಲ್ಲಿ ಡಿ.ಹೆಚ್.ಓ. ಕಚೇರಿಗೆ ಬಾಡಿಗೆಗೆ ಪಡೆದಿರುವ ವಿ.ಎನ್.ಎನ್.ಕಲ್ಯಾಣ ಮಂಟಪವು 19,602 ಚ.ಅಡಿಗಳಾಗಿದ್ದು, ಅದಕ್ಕೆ ರೂ.1,96,000/- ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವುದು ಮೇಲ್ನೋಟಕ್ಕೆ ತುಂಬಾ ಹೆಚ್ಚಾಗಿ ಕಂಡುಬರುತ್ತಿರುವುದರಿಂದ, ಮಾಲೀಕರೊಂದಿಗೆ ಸಂಧಾನ ಪಡಿಸಿ ಬಾಡಿಗೆಯನ್ನು ಕಡಿಮೆ ಮಾಡಿ ಮರು ನಿಗದಿ ಪಡಿಸಲು ಡಿ.ಹೆಚ್.ಓ ಹಾಗೂ ಪಿ.ಡಬ್ಲ್ಯೂ.ಡಿ.ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿರುವುದು ಕಂಡುಬರುತ್ತದೆ. ದಿ.9/8/2007 ರಂದು ಕೋಲಾರ ಡಿ.ಹೆಚ್.ಓ.ರವರ ಪರವಾಗಿ ಚಿಕ್ಕಬಳ್ಳಾಪುರ ಸಾರ್ವಜನಿಕ ಆಸ್ಪತ್ರೆಯ ಡಿ.ಹೆಚ್.ಓ ರವರು ಎ.ಪಿ.ಎಂ.ಸಿ. ಕಾರ್ಯದರ್ಶಿಗಳಿಗೆ ಪತ್ರ ಬರೆದು ಎ.ಪಿ.ಎಂ.ಸಿ.ಗೆ ಸೇರಿದ ಕಟ್ಟಡವನ್ನು ಡಿ.ಹೆಚ್.ಓ ಕಚೇರಿಗೆ ಬಾಡಿಗೆಗೆ ನೀಡಲು ಸದರಿಯವರು ಮೌಖಿಕವಾಗಿ ಒಪ್ಪಿಕೊಂಡಂತೆ ಒಪ್ಪಿಗೆ ಪತ್ರವನ್ನು ನೀಡುವಂತೆ ಕೋರಿರುವುದು ಕಂಡುಬರುತ್ತದೆ. ಅದೇರೀತಿ, ಅದೇ ದಿನಾಂಕದಂದು ಜಿ.ಎನ್.ಆಂಜನೇಯಮೂರ್ತಿ ಎಂಬುವರಿಗೆ ಪತ್ರ ಬರೆದು ಸದರಿಯವರ ದಾಸ್ತಾನು ಮಳಿಗೆಯನ್ನು ಆರೋಗ್ಯ ಇಲಾಖೆಗೆ ಬಾಡಿಗೆಗೆ ನೀಡಲು ಮನವಿ ಮಾಡಿದ ಮೇರೆಗೆ ಸದರಿಯವರು ಮೌಖಿಕವಾಗಿ ಒಪ್ಪಿರುವಂತೆ ಒಪ್ಪಿಗೆ ಪತ್ರವನ್ನು ನೀಡುವಂತೆ ಕೋರಿರುವುದು ಕಂಡುಬರುತ್ತದೆ. ದಿ.11/3/2008 ರಂದು ಡಿ.ಹೆಚ್.ಓ ರವರು ಲೋಕೋಪಯೋಗಿ

ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಪತ್ರ ಬರೆದು ಡಿ.ಹೆಚ್.ಓ ರವರ ನೂತನ ಕಚೇರಿಗೆ ವೆಂಕಟೇನಹಳ್ಳಿ ಕಲ್ಯಾಣ ಮಂಟಪದ ಒಂದು ಭಾಗವನ್ನು ಬಾಡಿಗೆಗೆ ನೀಡಲು ಅದರ ಮಾಲೀಕರಾದ ಶ್ರೀಮತಿ.ವಿ.ಎನ್.ಅನಸೂಯಮ್ಮನವರು ಒಪ್ಪಿದ್ದು, ಸದರಿ ಕಟ್ಟಡವನ್ನು 19/12/2007 ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಅದನ್ನು ಪರಿಶೀಲಿಸಿ ಮಾಸಿಕ ಬಾಡಿಗೆ ದರವನ್ನು ನಿಗದಿಪಡಿಸಿಕೊಡಬೇಕೆಂದು ಕೇಳಿರುವುದು ಕಂಡುಬರುತ್ತದೆ. ದಿ.16/8/2007 ರಂದು ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು ಎ.ಪಿ.ಎಂ.ಸಿ.ಯಾರ್ಡ್ ಮತ್ತು ಜಿ.ಎನ್.ಆಂಜನೇಯಮೂರ್ತಿ ಬಿನ್ ನರಸಿಂಹಯ್ಯ ಇವರುಗಳು ತಮ್ಮ ದಾಸ್ತಾನು ಮಳಿಗೆಯನ್ನು ಡಿ.ಹೆಚ್.ಓ ಕಚೇರಿಗೆ ಬಾಡಿಗೆಗೆ ನೀಡಲು ಕೋರಿದ್ದು, ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಆದ್ದರಿಂದ, ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸಿಕೊಡಬೇಕೆಂದು ಕೇಳಿರುವುದು ಕಂಡುಬರುತ್ತದೆ. ದಿ.13/8/07 ರಂದು ಆಂಜನೇಯ ಮೂರ್ತಿಯವರು ಪತ್ರ ಬರೆದು ಕೆಲವು ಷರತ್ತಿಗೊಳಪಟ್ಟು ಬಾಡಿಗೆಗೆ ನೀಡಿರುತ್ತಾರೆನ್ನುವುದು ಕಂಡುಬರುತ್ತದೆ. ಕಚೇರಿ ಟಿಪ್ಪಣಿಯ ನಕಲನ್ನು ಪರಿಶೀಲಿಸಿದಾಗ, ಡಿ.ಹೆಚ್.ಓ ಕಚೇರಿಗೆ ಬಾಡಿಗೆ ಕಟ್ಟಡವನ್ನು ಪಡೆಯುವ ಬಗ್ಗೆ ನಡೆದ ನಡವಳಿಕೆ ಎಂದು ಕಂಡುಬರುತ್ತಿದ್ದು, ಶ್ರೀಮತಿ.ಅನುಸೂಯಮ್ಮನವರು ವಿ.ಎನ್.ಎನ್.ಕಲ್ಯಾಣ ಮಂಟಪದ ಒಂದು ಭಾಗವನ್ನು ಬಾಡಿಗೆಗೆ ನೀಡಲು ಒಪ್ಪಿರುತ್ತಾರೆಂದು ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯನ್ನು ಸದರಿ ಕಟ್ಟಡದ ಒಂದು ಭಾಗದಲ್ಲಿ ನಡೆಸಲು ರೂ.9,990/- ಬಾಡಿಗೆ ನಿಗದಿ ಪಡಿಸಲು ಅಭಿಪ್ರಾಯ ನೀಡಿರುತ್ತಾರೆನ್ನುವುದು ಕಂಡುಬರುತ್ತದೆ. ಹಾಗೆಯೇ ದಿ.1/3/2013 ರಿಂದ ಸದರಿ ಬಾಡಿಗೆ ಕಟ್ಟಡದಲ್ಲಿ ಡಿ.ಹೆಚ್.ಓ ಕಚೇರಿಯನ್ನು ಸ್ಥಳಾಂತರಿಸಿರುವುದು ಕಂಡುಬರುತ್ತದೆ. ದಿ.19/3/2008 ರಂದು ಪಿ.ಡಬ್ಲ್ಯೂ.ಡಿ. ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ರೂ.12,000/- ಬಾಡಿಗೆ ನಿಗದಿ ಪಡಿಸಿ ದೃಢೀಕರಿಸಿರುವುದು ಕಂಡುಬರುತ್ತದೆ. ದಿ.24/3/08 ರಂದು

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ಬಾಡಿಗೆ ರೂ.9,990/- ಗಳನ್ನು ನಿಗದಿ ಪಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿರುವುದು ಕಂಡುಬರುತ್ತದೆ. ದಿ.20/3/2008 ರಲ್ಲಿ ಅನುಸೂಯಮ್ಮ ಎಂಬುವರು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ವಿ.ಎನ್.ಎನ್.ಕಲ್ಯಾಣ ಮಂಟಪವನ್ನು ತಿಂಗಳ ಬಾಡಿಗೆ ರೂ.9,990/- ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತಾರೆ ಎನ್ನುವುದು ಕಂಡುಬರುತ್ತದೆ. ದಿ.19/3/2008 ರಂದು ಪಿ.ಡಬ್ಲ್ಯೂ.ಡಿ. ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಪತ್ರ ಬರೆದು ಇಲಾಖಾವಾರು ಬಾಡಿಗೆ ನಿಗದಿ ಪಡಿಸಿ ದೃಢಪತ್ರ ನೀಡಿರುವುದು ಕಂಡುಬರುತ್ತದೆ.

7) ಯಾವುದೇ ಸರ್ಕಾರಿ ಕಚೇರಿಗೆ ಸರ್ಕಾರಿ ಜಾಗ ಅಥವಾ ಕಟ್ಟಡಗಳು ಲಭ್ಯವಿಲ್ಲದ ಸಮಯದಲ್ಲಿ ಖಾಸಗಿ ಕಟ್ಟಡ ಅಥವಾ ಜಾಗವನ್ನು ಪಡೆಯುವ ಸಂದರ್ಭದಲ್ಲಿ ಸಾರ್ವಜನಿಕರಿಂದ ಟೆಂಡರನ್ನು ಕೆ.ಟಿ.ಪಿ.ಪಿ. ಕಾಯಿದೆಯನ್ವಯ ಕರೆದು ಮುಂದುವರೆಯಬೇಕಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಆ ರೀತಿ ಕ್ರಮ ಕೈಗೊಂಡ ಬಗ್ಗೆ ಯಾವುದೇ ದಾಖಲೆಗಳನ್ನು ಚಿಕ್ಕಬಳ್ಳಾಪುರ ಡಿ.ಹೆಚ್.ಓ, ಕಚೇರಿಯಿಂದ ಹಾಜರು ಪಡಿಸಿಲ್ಲ. ಅಲ್ಲದೆ, ದಿ.9/11/12 ರಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಆಯುಕ್ತರಿಗೆ ಬರೆದ ಪತ್ರದಲ್ಲಿ ಟಿ.ಹೆಚ್.ಓ ಕಚೇರಿಯು ಜಿಲ್ಲಾಸ್ಪತ್ರೆಯ ಆವರಣದಲ್ಲಿ ನಡೆಯುತ್ತಿದ್ದು, ಬಾಡಿಗೆಗೆ ಪಡೆದಿರುವ ಕಟ್ಟಡದಲ್ಲಿ ಕೇವಲ ನಾಮಫಲಕ ಬಿಟ್ಟರೆ ಯಾವುದೇ ಕೆಲಸ ಕಾರ್ಯ ನಡೆಯುತ್ತಿಲ್ಲ ಮತ್ತು ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 2000 ದ ನೀತಿ ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಬಾಡಿಗೆ ಪಾವತಿಸಿಕೊಂಡು ಬಂದಿರುವುದು ಕಂಡುಬಂದಿರುತ್ತದೆ ಎಂದು ವರದಿಯನ್ನು ಮಾಡಿರುತ್ತಾರೆ.

8) ಇವೆಲ್ಲವನ್ನು ಗಮನಿಸಿದಾಗ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯು 2007 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯ ಆವರಣದಲ್ಲಿ ನಡೆಯದಿದ್ದರೂ ಕೂಡ, ಅಂದಿನ ಆರೋಗ್ಯಾಧಿಕಾರಿಗಳು ಡಿ.ಹೆಚ್.ಓ ಕಚೇರಿಗೆ ಬಾಡಿಗೆಗೆ ಪಡೆದ ಕಲ್ಯಾಣ ಮಂಟಪದಲ್ಲಿ ಟಿ.ಹೆಚ್.ಓ ಕಚೇರಿಯ ನಾಮಫಲಕವನ್ನು ಹಾಕಿ, ಅಲ್ಲಿ ಕಚೇರಿ ನಡೆಸದೆ, ಸದರಿ ಕಚೇರಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹಾಗೆಯೇ ಡಿ.ಹೆಚ್.ಓ ಕಚೇರಿಗೆ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆಯುವಾಗ ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮದಂತೆ ಕ್ರಮ ಕೈಗೊಂಡಿಲ್ಲವೆನ್ನುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಈ ದೂರಿನ ವಿಚಾರವಾಗಿ 2007 ರಿಂದ ಈವರೆಗೆ ಚಿಕ್ಕಬಳ್ಳಾಪುರ ಡಿ.ಹೆಚ್.ಓ ಕಚೇರಿಯಲ್ಲಿ ಕೆಲಸ ನಿರ್ವಹಿಸಿದ ಡಿ.ಹೆಚ್.ಓ.ರವರುಗಳಿಂದ ಆಕ್ಷೇಪಣೆ ತರಿಸಲು ಆದೇಶವಾಗಿರುತ್ತದೆ. ಆ ಪ್ರಕಾರ ಆಸನೌ ವರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

9) 1ನೇ ಆಸನೌ ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.24/10/2007 ರಿಂದ ದಿ.8/7/2009 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಮದುವೆ ಮಂಟಪವನ್ನು ಬಾಡಿಗೆಗೆ ಪಡೆದಿದ್ದು, ತಿಂಗಳಿಗೆ ರೂ.60,000/- ಕೊಡಲು ಒಪ್ಪಿಗೆಯಾಗಿದ್ದು, ಕಟ್ಟಡದಲ್ಲಿ ಒಟ್ಟು 6 ಕಚೇರಿಗಳಿದ್ದು, ಒಂದು ಕಚೇರಿಗೆ ರೂ.9,999/- ರಂತೆ ನಿಗಧಿಪಡಿಸಲಾಗಿತ್ತು. ನನ್ನ ಕರ್ತವ್ಯದ ಅವಧಿಯಲ್ಲಿ 3 ಕಚೇರಿಗಳು ಹೆಚ್ಚಿಗೆ ಬಂದಿದ್ದು, ಬಾಡಿಗೆ ಮಂಟಪದಲ್ಲಿಯೆ ಮುಂದುವರೆಸಿದ್ದು, ಯಾವುದೇ ರೀತಿಯ ಹೆಚ್ಚಿನ ಹಣ ಪಾವತಿಸಿರುವುದಿಲ್ಲ. ತಾನು ದಿ.31/8/2012 ರಂದು ನಿವೃತ್ತಿ ಹೊಂದಿರುತ್ತೇನೆಂದು ಹೇಳಿರುತ್ತಾರೆ.

10) 2ನೇ ಆಸನೌ ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.18/3/2008 ರಿಂದ ದಿ.4/3/2014 ರವರೆಗೆ ಚಿಕ್ಕಬಳ್ಳಪುರ ಜಿಲ್ಲಾ ಮಲೇರಿಯಾಧಿಕಾರಿಯಗಿ ಕರ್ತವ್ಯ ನಿರ್ವಹಿಸಿದ್ದು, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿಗಳ ಆದೇಶದ ಮೇರೆಗೆ ದಿ.8/5/2013 ರಿಂದ ದಿ.28/6/2013 ರವರೆಗೆ ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯ ಪ್ರಭಾರವನ್ನು ನಿರ್ವಹಿಸಿರುತ್ತೇನೆ. ತನ್ನಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ಹೇಳಿರುತ್ತಾರೆ.

11) 3ನೇ ಆಸನೌ ರವರು ದಿ.5/8/2011 ರಿಂದ ದಿ.8/5/2013 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, 2007 ರಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಕಲ್ಯಾಣ ಮಂಟಪವನ್ನು ಬಾಡಿಗೆಗೆ ಪಡೆದಿದ್ದು, ನಿಗದಿ ಪಡಿಸಿದಂತೆ ಬಾಡಿಗೆಯನ್ನು ಪಾವತಿಸಲಾಗಿದ್ದು, ಇಲಾಖೆಯ ಕೆಲಸಗಳಿಗೆ ಮಾತ್ರ ಕಟ್ಟಡವನ್ನು ಉಪಯೋಗಿಸಲಾಗುತ್ತಿದ್ದು, ಯಾವುದೇ ನಿಯಮಗಳ ಉಲ್ಲಂಘನೆ ಆಗಿರುವುದಿಲ್ಲ ಹಾಗೂ ಸರ್ಕಾರಕ್ಕೆ ಯಾವುದೇ ನಷ್ಟ ಉಂಟು ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

12) 4ನೇ ಆಸನೌ ರವರು ತಾನು ದಿ.28/6/2013 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಜಿಲ್ಲಾಧಿಕಾರಿಗಳಿಗೆ ಪ್ರಕರಣವನ್ನು ಮನವರಿಕೆ ಮಾಡಿಕೊಟ್ಟು ನೂತನ ಕಟ್ಟಡದಲ್ಲಿ ಸ್ಥಳಾವಕಾಶ ಪಡೆದಿರುತ್ತೇನೆ. ಬಾಡಿಕೆ ಕಟ್ಟಡವನ್ನು ಕೈಬಿಟ್ಟು ಜಿಲ್ಲಾಡಳಿತ ಭವನಕ್ಕೆ ಡಿ.ಹೆಚ್.ಓ. ವ್ಯಾಪ್ತಿಯ ಎಲ್ಲಾ ಕಚೇರಿಗಳನ್ನು ವರ್ಗಾಯಿಸಿಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಎರಡು ಕಡೆ ಫಲಕ ಹಾಕಲಾಗಿ ಗೊಂದಲ ಉಂಟಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ಯಾವುದೇ ವಿವರಗಳು ಲಭ್ಯವಾಗಿರುವುದಿಲ್ಲವೆಂದು ಹೇಳಿರುತ್ತಾರೆ.

13) 3ನೇ ಆಸನೌ ರವರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಚಿಕ್ಕಬಳ್ಳಾಪುರ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಒಂದು ಹೆಚ್ಚುವರಿ ಕಟ್ಟಡವನ್ನು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಿರ್ವಹಿಸುತ್ತಿದ್ದು, ಅಲ್ಲಿ ಆಡಳಿತ ಕಚೇರಿಯನ್ನು ಮಾತ್ರ ನಿರ್ವಹಿಸುತ್ತಿದ್ದು, ವೆಂಕಟೇನಹಳ್ಳಿ ನಾರಾಯಣಪ್ಪ ಕಲ್ಯಾಣ ಮಂಟಪದಲ್ಲಿ ಅವರ ಕೊಠಡಿ, ಕೊಠಡಿ

ದಾಸ್ತಾನು ಹಾಗೂ ಇತರೆ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲಾಗುತ್ತಿತ್ತು ಎಂದು ಹೇಳಿರುತ್ತಾರೆ. ಅದೇರೀತಿ ಉಳಿದ ಎದುರುದಾರರ ಆಕ್ಷೇಪಣೆಯಲ್ಲಿ ಕೂಡ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ 2 ಕಟ್ಟಡಗಳನ್ನು ನಿಗದಿ ಪಡಿಸಿರುವುದು ಕಂಡುಬರುತ್ತದೆ. ಸದರಿ ಅಂಶವನ್ನು ಗಮನಿಸಿದಾಗ, 2007 ರಲ್ಲಿ ಆರೋಗ್ಯಾಧಿಕಾರಿಗಳು ಡಿ.ಹೆಚ್.ಓ ಕಚೇರಿಗೆ ಬಾಡಿಗೆಗೆ ಪಡೆದ ಕಲ್ಯಾಣ ಮಂಟಪದಲ್ಲಿ ಟಿ.ಹೆಚ್.ಓ. ನಾಮ ಫಲಕವನ್ನು ಹಾಕಿ ಅಲ್ಲಿ ಕಚೇರಿ ನಡೆಸದೆ, ಸದರಿ ಕಚೇರಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆನ್ನುವುದು ಮತ್ತು ಸದರಿ ಟಿ.ಹೆಚ್.ಓ ಕಚೇರಿಯ ನಾಮ ಫಲಕ ಹಾಕಿದ ಭಾಗಕ್ಕೆ ಪ್ರತ್ಯೇಕವಾಗಿ ರೂ.9,990/- ಬಾಡಿಗೆಯನ್ನು ನೀಡುತ್ತಿದ್ದುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಹಂತದಲ್ಲಿ ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ ಕಲಂ 5ನ್ನು ಗಮನಿಸುವುದು ಸೂಕ್ತವೆನಿಸುತ್ತದೆ.

14) *Section 5 of Karnataka Transparency in Public Procurement Act states- on and from the date of commencement of this Act no procurement entity shall procure goods or services except by inviting tender for supply.*

15) ಸದರಿ ಅಂಶವನ್ನು ಗಮನಿಸಿದಾಗ, 2007 ರಲ್ಲಿ 1ನೇ ಆಸನೌ ರವರು ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮದಂತೆ ಕ್ರಮವನ್ನು ಕೈಗೊಳ್ಳದಿರುವುದು ಅವರ ಕರ್ತವ್ಯಲೋಪವನ್ನು ತೋರಿಸುತ್ತದೆ. ಅದೇರೀತಿ ನಂತರದಲ್ಲಿ ಕರ್ತವ್ಯ ನಿರ್ವಹಿಸಿದ ಆಸನೌ ರವರು ಎರಡು ಕಡೆ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ನಿಗದಿಯಾಗಿರುವ ವಿಚಾರ ಗೊತ್ತಿದ್ದರೂ ಸಹ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಬಾಡಿಗೆಯನ್ನು ಪಾವತಿಸಿರುವುದು ಅವರ ಕರ್ತವ್ಯಲೋಪವನ್ನು ತೋರಿಸುತ್ತದೆ.

16) ಆದುದರಿಂದ, ಆಸನೌ ರವರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

17) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಆಸನೌ 1 ರಿಂದ 4 ರವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

18) ಮೇಲ್ಕಂಡ ಆಸನೌ ರವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1 ರಿಂದ 4 ನೇ ಆಸನೌ ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ವಿಚಾರಣೆ ನಡೆಸಲು ಹಾಗೂ 1ನೇ ಆಸನೌ ರವರು ದಿ.31/8/2012 ರಂದು, 3ನೇ ಆಸನೌ ರವರು 30/9/2013 ರಲ್ಲಿ ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದನ್ವಯ ಶಿಸ್ತು ಪ್ರಾಧಿಕಾರವು ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸಿದೆ. ಆದ್ದರಿಂದ ಈ ದೋಷಾರೋಪಣೆ.

8. As per the above order of Hon'ble KSAT, complying the legal requirements enquiry was proceeded further, against DGO-1 only.

9. On appearance, on 29.11.2017, plea/first oral statement of DGO-1/ Dr.D.B.Anjutagi was also recorded and DGO-1/

Dr.D.B.Anjutagi did not plead guilty. DGO-1/ Dr.D.B.Anjutagi filed written statement.

10. The DGO-1/ Dr. D.B.Anjutagi, in his written statement, has mainly contended that Chikkaballapura district was constituted newly as per the Government order, dated 21.8.2007. Dr. Rajeev was appointed as in charge DHO of Chikkaballapura district, who was working as regular District Health Officer of Kolar District. He started to run the DHO office of Chikkaballapura District, in Taluk Health Office, which was situated in the premises of District Hospital from 23.8.2007.

11. It is further contended by DGO-1 that on 24.10.2007, he was appointed as District Health officer of Chikkaballapura District and he started the process of taking a private building on rental basis to run the offices of District Health Office.

12. Accordingly, he took private building, i.e., V.N.N Kalyana Mantappa, B.B.Road, Chikkaballapura; for rent on 19.11.2007. After fixing of rent by PWD Department, subsequently a meeting was held regarding fixation of rent and it was decided to pay rent of Rs. 60,000/-, per month, to the said building.

13. It is further contended that the District Health Office, Chikkaballapura District and other four offices such as District Malaria Office, District Leprosy Office, Reproductive and child Health Office and District TB office started to run in the said building. That apart District Programme Management Office,

9-3-2015

District Surveillance Office, District Level Office of Food safety and Standards Authority and Drug and Vaccine stores were also running in the same building in addition to the above said offices.

14. It is further contended that the Chief Executive Officer, Zilla Panchayath, Chikkaballapura; objected to give administrative approval for an amount of Rs. 60,000/-, as rent, per month, in the name of single office; i.e., District Health Office and therefore divided the total rental amount at the rate of Rs. 9990/-, for each office, including THO, Chikkaballapura Taluk; in order to make convenient to pay monthly rent of Rs. 60,000/- to the landlord of the building.

15. It is further contended that at the time of starting the offices in the said building, the sign board of Taluk Health Office, Chikkaballapura taluk; was also fixed in the said building in order to provide a space to Taluk Health Office. However; the Taluk Health Officer remained in the premises of District Health Office, Chikkaballapura; due to shortage of accommodation in the rented building, after functioning of all other offices. But the sign board of office of THO Chikkaballapura Taluk remained in the said building even though said office did not shift to the said rental building.

16. The above exercise was done by the DGO -1 in the above said circumstances to pay Rs. 60,000/-, per month, to the landlord of the said building and therefore divided into 6 divisions, including

Taluk Health Office and made an arrangement to pay rent of Rs. 9990/-, per month, for each office.

17. During the tenure, the construction of the district administrative building was not completed and question of shifting to Government building also did not arise. The complainant made such a false complaint, with a malafide intention and without knowing the facts.

18. It is further contended that DGO-1 has taken prior approval from the Competent Authority and taken the building on rental basis in the year 2007 and there is no irregularities committed in the process of taking building on rental basis.

19. The proceedings are not maintainable against the DGO-1, since he has already been retired from service. Hence, prayed to exonerate him from the charges leveled against him.

20. DGO-2 , 3 and 4, even though filed written statements, since now the case is pertaining to DGO-1 only, their written statements need not be considered.

21. On behalf of the Disciplinary Authority, the complainant Sri.N.Venkatesh, was examined as PW-1; Investigating Officer Sri.R.Revanna, was examined as PW-2; Dr.Prakash.B., was examined as PW-3 and Sri.B.S.Shekharappa, was examined as PW-4 and Exs P-1 to Ex.P-8 as well as Ex.D-1 were marked.

22. Second oral statement of DGO No.1, was also recorded on 14.3.2018. After remand, as per the order passed by Hon'ble KSAT, under Rule 11(18) of Karnataka Civil Services (Classification, Control and Appeal) Rules, 1957 questionnaire of DGO-1/ Dr.D.B.Anjutagi was recorded on 4.11.2023.

23. DGO-4 /Dr.Rangaswamy H.V was examined as DW-1, DGO-3/ Dr.Bhaktavastalam was examined as DW-2 and Dr.Mitranna was examined as DW 3 and through them, Exs.D2 to D-15 were marked. There was no defence evidence on behalf of DGO-1/ Dr.D.B.Anjutagi and he submitted written arguments. Heard the submissions.

24. Hence, the point for consideration is:

(1) Whether the disciplinary authority proves the charges leveled against DGO-1/ Dr.D.B.Anjutagi?

25. The finding is in the affirmative, for the following:

## REASONS

26. PW-1, the complainant, has mainly deposed that even though Taluk Health Officer's office was running in the District Government Hospital building, in Chikkaballapura; showing that the Taluk Health office was running in District Health Office premises, rent of Rs.9990/- was paid, per month and caused loss to the Government. Hence he lodged a complaint. through him Ex.P-1 to 8 were marked.

27. PW-2, the Chief Accountant, has mainly deposed that as per the direction of his superior officers, on 3.8.2012 he inspected District Health and Family Welfare Office and it was found out that board of Taluk Health Officer was fixed therein, but the said office was not functioning there. The said office was situating in Distinct hospital premises. His report is Ex.P-5.

28. The PW-3, in charge District Surgeon and PRO, deposes with regard to issuance of a document, marked Ex.P-8(a) and also deposes that as per the said document the office of Taluk Health Officer was running in District Hospital premises.

29. PW-4, the then CEO of Zilla Panchayath, Chikkaballapura; deposes that he directed the Chief Accountant of Zilla Panchayath, namely- Revanna, to investigate into the matter and the said Revanna filed the report on 29.8.2012 and in the said report it was stated that Office of Taluk Health Officer was in the premises of District hospital and the same was not functioning. Only board was fixed therein and the order passed by him is Ex.P-5. The report submitted by him to Commissioner Health and Family Welfare Services is Ex.P-8.

30. Ex.P-1 is the complaint, Ex.P-2 and 3 are Forms No. 1 and 2, filed by the complainant. Ex.P-4 is the letter, dated 1.10.2012, of CEO, Zilla Panchayath, Chikkaballapura; written to Principal Secretary, Karnataka Government Health and Family Welfare Department Bangalore. But the same is not signed by any

officer. Ex.P-5 is the memorandum, dated 15.6.2012, of CEO, Zilla Panchayath Chikkaballapura. Ex.P-5(a) is the report submitted by Chief Accounts Officer, Zilla Panchayath Chikkaballapura; to CEO Zilla Panchayath Chikkaballapura. Ex.P-6 is the letter, dated 13.3.2014, of Commissioner, Health and Family Welfare, Bangalore; to DRE-1 and annexed documents, including rent deed. Ex.P-7 is the rejoinder, dated 24.5.2014, filed by the complainant. Ex.P-8 is the letter, dated 9.11.2012, of Chief Executive Officer, Zilla Panchayath, Chikkaballapura; to the Commissioner, Health and Family Welfare, Bangalore; with other documents. Ex.P-8 (a) is the documents submitted along with Ex.P-8.

31. Even though DGO-2 to 4 /DW-1 to 3 were examined and through them Ex.D-2 to 15 were marked; their evidence need not be considered in this case. Except Ex,D-2, Ex.D-14 and 15, other documents, marked Ex.D-1, Ex.D-3 to 13, were also marked in 'P' series. DGO-1 has not examined himself and no document has been marked through him.

32. The undisputed facts of the case are that after formation of new Chikkaballapura district, the District Hospital Office was started functioning in the office of Taluk Health Office, which was already in existence at Chikkaballapura and (2) District Health offices were started functioning in a rented building, i.e., in VNN Kalyana Mantapa. As per Ex.P-8, six offices started to run in the premises of District Health Offices; ie., office of District Health Officer (2) RCH office, (3) District Malaria Office, (4) District

Leprosy Office (5) TB Control Office and (6) Taluk Health Office, Chikkaballapura.

33. With regard to 2nd charge of not complying with the requirements of provisions of Karnataka Transparency in Public Procurement Act, it is the specific charge leveled against the DGO-1 also, when getting the building/ VNN Kalyana Mantapa, on rent, for running the District Health Offices, the requirements of KTPP Act were not complied with, then the DGO-1, admittedly, who obtained the said VNN Kalyana mantapa for District Health Offices, should have produced the document to show that same have been complied with. The DGO-1 has also not produced any document in that regard. However he contends that administrative approval was issued by Chief Executive Officer, Zilla Panchayath, Chikkaballapura. Further Ex.P-8, report, shows that the said requirements have not been complied with. Hence, Charge No. 2 is proved.

34. With regard to charges No. 1 and 3, since these two charges are interrelated, the same are considered together. It is the specific charge that even though O/o Taluk Health Officer was running in Chikkaballapura District Hospital premises, fixing the sign board of Taluk Health Officer in District Health Office premises, which was running in VNN Kalyana Mantapa and the Taluk Health Office was not functioning in the rented building, rent of Rs. 9990/-, per month, was paid. In that regard Ex.D-5 (which is also one of the documents of Ex.P-6) i.e., rent agreement, shows that

the same was entered into by DGO-1, with the owner of VNN Kalyana Mantapa, dated 20.3.2008. PW-1, PW-2 and PW-3 also deposed to that effect. Further PW-4 ( on the basis of the report of Revanna / PW-2) also deposes to that effect. Further the same has been admitted by DGO-1 in his written statement. At the cost of repetition, the same are reproduced again. i.e., "On 24.10.2007 DGO-1 / Dr.D.B.Anjutagi appointed as District Health Officer of Chikkaballapura District and he started the process of taking private building on rental basis to run the offices of District Health Offices, (including the office of Taluk Health Office) Accordingly he took private building, i.e., VNN Kalyana Mantapa, BB road, Chikkaballapura; for rent on 19.11.2007. Rent agreement, dated 20.3.2008, was signed by the DGO-1 / Dr.D.B.Anjutagi. In para 7 of the written statement it is also admitted by DGO-1 that at the time of starting the offices in the said building the sign board of Taluk Health Office, Chikkaballapura taluk; was also fixed in the said building in order to provide a space to Taluk Health Office. However, the Taluk Health Officer remained in the premises of District hospital, Chikkaballapura; due to shortage of accommodation in the rented building, after functioning of all other officers, but the sign board of office of THO, Chikkaballapura Taluk; remained in the building even though said office did not shift to the above mentioned rental building. Further, in para -8, it is stated that the above exercises was done by DGO-1 in the above said circumstances to pay rent of Rs. 60,000/-, per month, to the land-lord of the said building. Therefore, the same was divided into

six divisions, including Taluk Health Office and made an arrangement to pay rent of Rs. 9990/-, per month, for each of office."

35. Further on behalf of DGO-1 also it is specifically suggested to PW-2 " ಡಿ.ಹೆಚ್.ಓ ಕಛೇರಿಯಲ್ಲಿ ಸ್ಥಳ ಅವಕಾಶ ಇಲ್ಲದೆ ಇರುವುದರಿಂದ ಟಿ.ಹೆಚ್.ಓ ಕಛೇರಿ ಮೊದಲು ಎಲ್ಲಿ ಕೆಲಸ ನಿರ್ವಹಿಸುತ್ತಿತ್ತೋ ಅಲ್ಲೇ ಕೆಲಸ ನಿರ್ವಹಿಸುತ್ತಿತ್ತು ಅಂದರೆ ಸರಿ".

36. Further on behalf of DGO-1 also it is specifically suggested to PW-3 " ಆಡಳಿತಾತ್ಮಕ ಕಾರಣಗಳಿಂದ ಹಾಗೂ ಸ್ಥಳವಕಾಶದ ಕೊರತೆಯಿಂದಾಗಿ ಟಿ.ಹೆಚ್.ಓ ಕಛೇರಿ, ಡಿ.ಹೆಚ್.ಓ ಕಛೇರಿಯಲ್ಲೂ ಮತ್ತು ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿಯೂ ಇತ್ತು ಎನ್ನುವ ವಿಚಾರ ನನಗೆ ಗೊತ್ತಿಲ್ಲ."

37. It is also suggested on behalf of DGO-1, in the cross examination of PW-4 "ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿಯ ಕಟ್ಟಡದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಗೆ ಕೊಟ್ಟ ಜಾಗದಲ್ಲಿ ಸ್ವಲ್ಪ ಭಾಗವನ್ನು ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿಗೆ ಉಪಯೋಗಿಸಿಕೊಂಡು ಒಂದು ಕೊಠಡಿಯನ್ನು ಮಾತ್ರ ತಾಲ್ಲೂಕು ಆರೋಗ್ಯ ಕಛೇರಿಯ ಉಪಯೋಗಕ್ಕೆ ಬಿಟ್ಟು ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯನ್ನು ಜಿಲ್ಲಾ ಆಸ್ಪತ್ರೆಯ ಆವರಣದಲ್ಲೇ ನಡೆಸುತ್ತಿದ್ದರು ಎಂದರೆ ಸರಿಯಲ್ಲ."

38. From all these admissions, it is clear that the sign board of Taluk Health Officer, Chikkaballapura; was fixed in the offices of District Health Office, but which was running in District hospital building, in Chikkaballapura.

39. Ex.D-15, the letter written by Taluk Health Officer, Chikkaballapura Taluk; to District Health and Family Welfare Officer, Chikkaballapura, dated 8.3.2013, shows- “ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿನ ಬಿ –ಬ್ಲಾಕ್ –1 (ಎ) ಭಾಗವನ್ನು ಚಿಕ್ಕಬಳ್ಳಾಪುರ ತಾಲ್ಲೂಕಿನ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿ ನಡೆಸಲು ನೀಡಿದ್ದು ಜೂನ್ 2008 ರಿಂದಲೂ ಕಾನೂನು ಪ್ರಕಾರ ನಿಗಧಿ ಪಡಿಸಲಾದ ಬಾಡಿಗೆಯನ್ನು ಪಾವತಿಸಲಾಗುತ್ತಿದೆ ಮತ್ತು ಸೀಮಿತ ಸ್ಥಳ ಅವಕಾಶ ಕಾರಣ ಪೂರ್ಣ ಪ್ರಮಾಣದ ಕಛೇರಿ ನಡೆಸಲು ಸಾಧ್ಯವಿಲ್ಲದೆ ಇರುವುದರಿಂದ ಅಲ್ಪ ಪ್ರಮಾಣದಲ್ಲಿ ಕೊಠಡಿಯನ್ನು ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ. “

40. From the said Ex.D-5/ rent agreement (one of the documents in Ex.D-6) and Ex.D-15 it is clear that in the premises of District Health Office premises one office of Taluk Health Officer was taken on rent and the rent was paid in that regard, even though the same was not functioning in the premises of District Health Office; but the Taluk Health Office was functioning in District hospital building at Chikkaballapura. Hence, it is more probable that even though the Taluk Health Officer’s office was functioning in the District Hospital building in Chikkaballapura; by fixing a board of Taluk Health Officer, Chikkaballapura; in the premises of District Health Offices, which premises was obtained on lease, rent was paid, at the rate of Rs. 9990/-, per month. Hence, the charges No.1 and 3 leveled against the DGO-1 are also proved.

41. It is specific case that rent at the rate of Rs. 9990/-, per month, was paid for the office of Taluk Health Officer. As per the imputation the premises of District Health Officers was taken for lease on 19.12.2007. Further in the imputation it is specifically stated that from 19.7.2007 till 8.7.2009 DGO-1 was the District Health Officer of Chikkaballapura District, Even though he retired from service on 31.8.2012. However the DGO-1, in his questioner, has stated that DC and CEO of Chikkaballapura District directed DGO-1 to get District administrative offices for rental at the earliest. Hence, the said VNN Kalyana Mantapa was selected and for six offices the same was taken on rent. In 2007 itself he was transferred from Chikkaballapura to other place. Since rent agreement is dated 20.3.2008 and signed by DGO-1, his said contention cannot be accepted. Hence, this DGO is also liable to pay/ refund the rent unnecessarily paid, at the rate of Rs. 9990/-, per month, from 19.12.2007 to 8.7.2009 i.e., for about 19 months which comes to Rs. 1,89,810/-. Hence DGO-1 is also liable to refund the same to government. Hence charge No. 1 and 3 are proved against DGO-1 also and Point No. 1 is answered accordingly

42. Point No. 2- In view of the answer to points No. 1 the following-

## FINDINGS

The disciplinary authority has proved the charges leveled against DGO-1/ Dr.D.B.Anjutagi.

DGO-1 is also liable to refund Rs.1,89,810/- to government.

Hence, this report is submitted to the Hon'ble Upalokayukta for further action.

Enquiry report and recommendation against the DGOs No. 2 to 4 were already submitted to Competent Authority. In turn Disciplinary Authority has passed Government order No. AaKuKa 181 MSA 2016, Bengaluru, dated 15.12.2020, against DGOs No.2 to 4 and enquiry proceeding against DGO-2 to 4 was closed on 30.12.2020.

The date of retirement of DGO-1/ Dr.D.B.Anjutagi is 31.8.2012.

24.5.24

(SHUBHAVEER.B)
Additional Registrar Enquiries-9
Karnataka Lokayukta, Bengaluru

PTO.

List of witnesses examined on behalf of Disciplinary Authority

PW-1 Sri N. Venkatesh
PW- 2 Sri R. Revanna
PW-3 Dr. Prakash B
PW-4 Sri B.S. Shekharappa

List of documents marked on behalf of Disciplinary Authority

| | |
|---|---|
| Ex.P1 | Complaint, dated 27/5/2013 |
| Ex.P2&3 | Complaint Form No.s I and II, dated 25/5/2013 |
| Ex.P4 | Letter, dated 1/10/2012, of CEO, ZP, Chikkaballapur to the Prl. Secretary, Karnataka Government, Health and Family Welfare Department, Bangalore |
| Ex.P5 | Memorandum, dated 15/6/2012 of CEO, ZP, Chikkaballapur. |
| Ex.P5(a) | Report submitted by Chief Accounts Officer, ZP, Chikkaballapur; to the CEO, ZP, Chikkaballapura |
| Ex.P6 | Letter, dated 13/3/2014, of Commissioner, Health and Family Welfare, Bangalore; to DRE-1, Karnataka Lokayukta, Bangalore with other documents |
| Ex.P7 | Rejoinder, dated 24/5/2014, of the complainant |
| Ex.P8 | Letter, dated 9/11/2012, of CEO, ZP, Chikkaballapur; to the Commissioner, Health and Family Welfare, Bangalore; with other documents |
| Ex.P8(a) | Documents submitted along with Ex.P8 |

List of witnesses examined on behalf of DGO.s

DW- 1 – Dr. Rangaswamy H.V

DW-2 – Dr. Bhaktavastalam

DW-3 – Dr. Mitranna

List of documents marked on behalf of DGO.s

| | |
|---|---|
| Ex.D1 | Administrative approval of ZP office, Chikkaballapur, dated 24/3/2008 and other documents |
| Ex.D2 | Government proceedings, dated 21/8/2007, to form Ramanagara and Chikkaballapura districts. |
| Ex.D3 | Letter, dated 19/3/2018, of EE, PWD, Chikkaballapur division, Chikkaballapur ; to Taluk Health Officer, Chikkaballapur |
| Ex.D4 | Administrative approval of ZP Office, Chikkaballapur; dated 24/3/2008 |
| Ex.D5 | Copy of the rent agreement executed between Anusuyamma/ owner of the building and B. Lokesh Kumar, THO as eell as DGO1. |
| Ex.D6 | Report of the Dy. Director and District Nodal office, Chikkaballapur |
| Ex.D7 | Letter, dated 24/9/2013, of District Health and Family Welfare Office, Chikkaballapur to the Commissioner, Health and Family Welfare office, Bangalore |
| Ex.D8 | Letter, dated 8/10/2013, of Taluk Health Officer, Chikkaballapur ;to the Dy. Director and District Nodal officer, Chikkaballapur |
| Ex.D9 | Letter, dated 17/10/2013, of the District Health and Family Welfare Officer, Chikkaballapur; to Anusuyamma/ owner of Venkatenahalli Narayana Kalyana Mantapa, Chikkaballapur. |
| Ex.D10 | Letter, dated 4/5/2012, of District Health and Family Welfare Officer, Chikkaballapur; to the CEO, ZP, Chikkaballapur. |
| Ex.D11 | Copy of the show cause notice, dated 6/3/2013, issued by the Commissioner, Health and Family Welfare officer, Bangalore; to the DGO-3 |

| | |
|---|---|
| Ex.D12 | Explanation, dated 12/3/2013, of DGO-3 to the Commissioner, Health and Family Welfare department, Bangalore |
| Ex.D13 | Official memorandum, dated 13/3/2014, issued by the Commissioner, Health and Family Welfare department, Bangalore |
| Ex.D14 | Copy of the sketch of Venkatenahalli Narayana Kalyana Mantapa, Chikkaballapur |
| Ex.D15 | Letter, dated 8/3/2013, of THO, Chikkaballapur to the DHO, Chikkaballapur |

24.5.24

(SHUBHAVEER.B)
Additional Registrar Enquiries-9
Karnataka Lokayukta,
Bengaluru

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

ನಂ:ಉಪಲೋಕ್-2/ಡಿಇ/361/2016/ಎ.ಆರ್.ಇ-9

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 29ನೇ ಮೇ 2024.

**-:: ಶಿಫಾರಸ್ಸು ::-**

ವಿಷಯ: ಆಪಾದಿತ ಸರ್ಕಾರಿ ನೌಕರರಾದ (1) ಡಾ: ಡಿ.ಬಿ.ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ (2) ಡಾ: ಕೆ. ಬಾಬುರೆಡ್ಡಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ (3) ಡಾ: ಬಿ ಭಕ್ತವತ್ಸಲಂ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಮತ್ತು (4) ಡಾ: ರಂಗಸ್ವಾಮಿ ಹೆಚ್ ವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಆದೇಶ ಸಂಖ್ಯೆ: ಅಕುಕ 181 ಎಂಎಸ್ಎ 2016, ಬೆಂಗಳೂರು, ದಿನಾಂಕ: 30/08/2016.
(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-2/ಡಿಇ/361/2016 ಬೆಂಗಳೂರು, ದಿನಾಂಕ: 08/09/2016.
(3) ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 24/05/2024.

*****

ಸರ್ಕಾರದ ಆದೇಶ ದಿನಾಂಕ: 30/08/2016 ರಂತೆ (1) ಡಾ: ಡಿ.ಬಿ.ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ (2) ಡಾ: ಕೆ. ಬಾಬುರೆಡ್ಡಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ (3) ಡಾ: ಬಿ ಭಕ್ತವತ್ಸಲಂ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಮತ್ತು (4) ಡಾ: ರಂಗಸ್ವಾಮಿ ಹೆಚ್ ವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ (ಇನ್ನು ಮುಂದೆ ಆಪಾದಿತ ಸರ್ಕಾರಿ

ನೌಕರರು 1 ರಿಂದ 4 ಅಂದರೆ ಚಿಕ್ಕದಾಗಿ 'ಆ.ಸ.ನೌಕರರು 1 ರಿಂದ 4' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-2/ಡಿಇ/361/2016 ಬೆಂಗಳೂರು, ದಿನಾಂಕ: 08/09/2016ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-9 ರವರಿಗೆ ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ (1) ಡಾ: ಡಿ.ಬಿ.ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ (2) ಡಾ: ಕೆ. ಬಾಬುರೆಡ್ಡಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ (3) ಡಾ: ಬಿ ಭಕ್ತವತ್ಸಲಂ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಮತ್ತು (4) ಡಾ: ರಂಗಸ್ವಾಮಿ ಹೆಚ್ ವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ರವರುಗಳ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## <u>ಅನುಬಂಧ-1</u>
## <u>ದೋಷಾರೋಪಣೆ ಪಟ್ಟಿ</u>

*ಆ.ಸ.ನೌ ರವರಾದ (1) ಡಾ: ಡಿ.ಬಿ. ಅಂಜುಟಗಿ, (2) ಡಾ: ಕೆ.ಬಾಬುರೆಡ್ಡಿ, (3)ಡಾ: ಬಿ.ಭಕ್ತವತ್ಸಲಂ, ಚಿಕ್ಕಬಳ್ಳಾಪುರ, ಮತ್ತು 4) ಡಾ: ರಂಗಸ್ವಾಮಿ ಹೆಚ್.ವಿ., ನೀವು ಚಿಕ್ಕಬಳ್ಳಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ:*

*(1) ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿಯು 2007ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯ ಆವರಣದಲ್ಲಿ ನಡೆದಿದ್ದರೂ ಕೂಡ, ಡಿ.ಹೆಚ್.ಓ. ಕಛೇರಿಗೆ ಬಾಡಿಗೆಗೆ ಪಡೆದ ಕಲ್ಯಾಣ ಮಂಟಪದಲ್ಲಿ ಟಿ.ಹೆಚ್.ಓ ಕಚೇರಿಯ ನಾಮಫಲಕವನ್ನು ಹಾಕಿ, ಅಲ್ಲಿ ಕಚೇರಿ ನಡೆಸದೆ, ಸದರಿ ಟಿ.ಹೆಚ್.ಓ ನಾಮಫಲಕ ಹಾಕಿದ ಭಾಗಕ್ಕೆ ಪ್ರತ್ಯೇಕವಾಗಿ ರೂ.9,990/- ಬಾಡಿಗೆಯನ್ನು ಪಾವತಿಸಿರುತ್ತೀರಿ.*

*(2) ಡಿ.ಹೆಚ್.ಓ ಕಚೇರಿಗೆ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆಯುವಾಗ ಸಾರ್ವಜನಿಕ ಟೆಂಡರನ್ನು ಕರೆಯದೇ, ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ ಕಲಂ 5ರಂತೆ ಕ್ರಮ*

*ಕೈಗೊಳ್ಳದೇ, ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ ಕಲಂ 5ನ್ನು ಉಲ್ಲಂಘಿಸಿರುತ್ತೀರಿ.*

*(3) 1 ರಿಂದ 4ನೇ ಆ.ಸ.ನೌ ಆದ ನೀವು ಎರಡು ಕಡೆ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ನಿಗದಿಯಾಗಿರುವ ವಿಚಾರ ಗೊತ್ತಿದ್ದರೂ ಸಹ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಬಾಡಿಗೆಯನ್ನು ಪಾವತಿಸಿ, ಕರ್ತವ್ಯಲೋಪವೆಸಗಿರುತ್ತೀರಿ.*

*ಅದ್ದರಿಂದ ಆ.ಸ.ನೌ ಆದ ನೀವು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ ಹಾಗೂ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ 1966ರ 2(1)(i) to (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುತ್ತೀರಿ.*

4. ಆ.ಸ.ನೌಕರರಾದ (2) ಡಾ: ಕೆ. ಬಾಬುರೆಡ್ಡಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ (3) ಡಾ: ಬಿ ಭಕ್ತವತ್ಸಲಂ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಮತ್ತು (4) ಡಾ: ರಂಗಸ್ವಾಮಿ ಹೆಚ್ ವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ರವರುಗಳ ವಿರುದ್ಧ ವಿಚಾರಣಾ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಆದೇಶ ದಿನಾಂಕ: 15/12/2020 ಈ ಸಂಸ್ಥೆಯಲ್ಲಿ ಸ್ವೀಕರಿಸಲಾಗಿದೆ. ಆ.ಸ.ನೌ (2) ರಿಂದ (4) ರವರ ವಿರುದ್ಧದ ವಿಚಾರಣೆ ಮುಕ್ತಾಯಗೊಂಡಿರುತ್ತದೆ.

5. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ (1) ಡಾ: ಡಿ. ಬಿ. ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಸಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

6. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌ (1) ಡಾ: ಡಿ. ಬಿ. ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ ರವರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ನಾಲ್ಕು ಜನ ಸಾಕ್ಷಿಗಳನ್ನು ಅಂದರೆ ಪಿ.ಡಬ್ಲ್ಯೂ–1 ರಿಂದ ಪಿ.ಡಬ್ಲ್ಯೂ–4 ರವರುಗಳನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ

ಪಿ–8(ಎ) ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರ ಪರವಾಗಿ ಮೂರು ಜನ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ನಿಶಾನೆ ಡಿ–1 ರಿಂದ ನಿಶಾನೆ ಡಿ–15 ದಾಖಲಾತಿಗಳನ್ನು ಗುರುತಿಸಲಾಗಿದೆ.

7. ಆ.ಸ.ನೌಕರರುಗಳ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡು ಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಆ.ಸ.ನೌಕರರ–1 ರವರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ಆ.ಸ.ನೌ–1 ರವರು ದಿನಾಂಕ: 31/08/2012 ರಂದು ನಿವೃತ್ತಿ ಹೊಂದಿರುತ್ತಾರೆ.

9. ಆ.ಸ.ನೌಕರರ–1 ರವರ ವಿರುದ್ಧ ಸಾಬೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಸಫಲವಾಗಿರುತ್ತದೆ'** ಎಂದು ನಿರ್ಣಯಿಸಿದೆ:–

> (1) 'ಆರೋಪಿತ ಸರ್ಕಾರಿ ನೌಕರ–1 ಆದ (1) ಡಾ: ಡಿ. ಬಿ. ಅಂಜುಟಗಿ, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ(ಹಾಲಿ ನಿವೃತ್ತ), ಚಿಕ್ಕಬಳ್ಳಾಪುರ ರವರ ಪಿಂಚಣಿಯಿಂದ 10% ರಷ್ಟು 6 ತಿಂಗಳ ವರೆಗೆ ತಡೆಹಿಡಿಯುವ ಮತ್ತು ರೂ: 1,89,810/– ಗಳನ್ನು ಆ.ಸ.ನೌಕರ–1 ರವರಿಂದ ವಸೂಲಾತಿ ಮಾಡುವ ದಂಡನೆಯನ್ನು ವಿಧಿಸಬಹುದೆಂದು ಸರ್ಕಾರದ ವಿವೇಚನೆಗೆ ಶಿಫಾರಸ್ಸು ಮಾಡಿದೆ'.

10. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/5/26

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–1,
ಕರ್ನಾಟಕ ರಾಜ್ಯ.